# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ದಿನಾಂಕಃ 28.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಕೆ.ಆರ್.ವಿ. ವಕೀಲರಿಂದಃ**

**9.** ನಾನು ಈ ದಾವೆಯನ್ನು ಸರ್ವೆ ನಂ.32/1 ರ 12 ಗುಂಟೆಗೆ ಜಮೀನಿಗೆ ಸಂಬಂಧಿಸಿದಂತೆ ಹಾಕಿದ್ದೇನೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ವೆಂಕಟಸ್ವಾಮಿ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ ಕರಗದ ಮುನಿಯಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ರಸ್ತೆ ಇದೆ. ಸದರಿ ಚೆಕ್ಕುಬಂದಿಗೆ ಸಂಬಂಧಿಸಿದಂತೆ ವಿಲ್ ಪತ್ರ ಕೊಟ್ಟಿದ್ದೇನೆ. ಸದರಿ ಚೆಕ್ಕುಬಂದಿಯೇ ವಿಲ್ ನಲ್ಲಿ ಬರೆಯಲಾಗಿದೆ. ನಾನು ಮೇಲೆ ಹೇಳಿದ ಚೆಕ್ಕುಬಂದಿಗೆ ಸಂಬಂಧಿಸಿದಂತೆ ದಾವೆ ಹಾಕಿರುವುದಿಲ್ಲ ಮತ್ತು ವಿಲ್ ನಲ್ಲಿಯೂ ಸಹ ಆ ಚೆಕ್ಕುಬಂದಿ ಇರುವುದಿಲ್ಲ ಮತ್ತು ಆ ಚೆಕ್ಕುಬಂದಿಗೆ ಯಾವುದೇ ದಾಖಲೆ ಸಹ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ ವೆಂಕಟಸ್ವಾಮಿಯವರ ಜಮೀನು ಎಂದು ಹೇಳಿದ್ದು ಅದರ ಸರ್ವೆ ನಂ.31/2 ಆಗಿರುತ್ತದೆ. ಸದರಿ ವೆಂಕಟಸ್ವಾಮಿ ನನ್ನ ಮಾವ. ಎ. ನಂಜಣ್ಣನವರಿಂದ ದೊಡ್ಡಪ್ಪಯ್ಯ, ಚಿಕ್ಕಪ್ಪಯ್ಯ ಮತ್ತು ವೆಂಕಟಸ್ವಾಮಿ ಆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. 24 ಗುಂಟೆ ಆಸ್ತಿಯನ್ನು ಎ. ನಂಜಣ್ಣನವರ ಕಡೆಯಿಂದ ಖರೀದಿ ಮಾಡಿದ್ದರು. ಎ.ನಂಜಣ್ಣನವರಿಂದ ಖರೀದಿ ಮಾಡಿದ ನಂತರ ಯಾರು ಯಾರಿಗೆ ಏನು ವಹಿವಾಟು ಆಗಿದೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ದೊಡ್ಡಪ್ಪಯ್ಯರವರು ಪಟೇಲ್ ಮುನಿಶಾಮಿರವರಿಗೆ 12 ಗುಂಟೆ 1960 ರಲ್ಲಿ ಮಾರಾಟ ಮಾಡಿದ್ದಾರೆ. ದೊಡ್ಡಪ್ಪಯ್ಯರವರು ಪಟೇಲ್ ಮುನಿಶಾಮಿರವರಿಗೆ 12 ಗುಂಟೆ ಮಾರಾಟ ಮಾಡಿದ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ ದೋಬಿ ಕೃಷ್ಣಪ್ಪ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಕರಗದ ಮುನಿಯಪ್ಪ ಮತ್ತು ದಕ್ಷಿಣಕ್ಕೆ ಸರ್ಕಾರಿ ರಸ್ತೆ. ಪಟೇಲ್ ಮುನಿಶಾಮಿರವರಿಂದ ಪುನಃ ದೊಡ್ಡಪ್ಪಯ್ಯ 12 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಅದರಲ್ಲಿಯೂ ಸಹ ಈಗ ಹೇಳಿದ ಚೆಕ್ಕುಬಂದಿಯೇ ತೋರಿಸಿದ್ದಾರೆ. ನಂತರ ದೊಡ್ಡಪ್ಪಯ್ಯ ಭದ್ರಾರೆಡ್ಡಿರವರಿಗೆ ಆ ಜಮೀನು ಮಾರಾಟ ಮಾಡಿದ್ದರು. ಅವರು 1965 ರಲ್ಲಿ ಆ ರೀತಿ ಮಾರಾಟ ಮಾಡಿದ್ದರು. ಆತ ಸರ್ವೆ ನಂಬರ್ ನಲ್ಲಿದ್ದ ಪೂರ್ತಿ 24 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ. ಸದರಿ ಭದ್ರಾರೆಡ್ಡಿರವರಿಗೆ ಆದ ಕ್ರಯಪತ್ರಕ್ಕೆ ಎ.ನಂಜಣ್ಣ ಇವರಿಂದ ಖರೀದಿ ಮಾಡಿದ ಖರೀದಿದಾರರ ಪೈಕಿ ಇಬ್ಬರು ಸಹಿ

ಮಾಡಿರುವುದಿಲ್ಲ. ಭದ್ರಾರೆಡ್ಡಿ ಮತ್ತು ವೆಂಕಟಸ್ವಾಮಿ ಇವರ ನಡುವೆ ಯಾವುದೇ ವಿಭಾಗವಾಗಿಲ್ಲ. ಮೇಲೆ ಹೇಳಿದ ಕ್ರಯಪತ್ರಗಳ ಆಧಾರದ ಮೇಲೆ ಖಾತೆ ಮತ್ತು ಪಹಣಿ ಆಗಿರಲಿಲ್ಲ. ನಿಪಿ-7 ರಲ್ಲಿ ಆರ್.ಆರ್.5 ದಾಖಲೆಯಲ್ಲಿ ಸರ್ವೆ ನಂ.31/2 ರಲ್ಲಿ ಪ್ರತಿವಾದಿಯರ ಮುತ್ತಾತ ವೀರಾರೆಡ್ಡಿ ಬಿನ್ ಗುಡ್ಡಾರೆಡ್ಡಿ ಎನ್ನುವ ಹೆಸರು ನಮೂದಾಗಿದೆ ಎಂದರೆ ನಿಜ. ನಿಪಿ-8 ದಾಖಲೆಯಲ್ಲಿ ಸರ್ವೆ ನಂ.31/2 ರಲ್ಲಿ ಪ್ರತಿವಾದಿಯರ ಮುತ್ತಾತ ವೀರಾರೆಡ್ಡಿ ಬಿನ್ ಗುಡ್ಡಾರೆಡ್ಡಿ ಎಂದು ಸ್ವಾಧೀನದಾರ ಎಂದು ತೋರಿಸಲಾಗಿದೆ ಎಂದರೆ ನಿಜ. ನಿಪಿ-9 ರಿಂದ 11 ಕಾಲಂ ನಂ.9 ರಲ್ಲಿ ಬಸಪ್ಪ ಬಿನ್ ಮುನಿಯಪ್ಪ ಎಂದು ಹೆಸರು ಇದ್ದು ಅವರು ಯಾರು ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯ ತಂದೆ ರಾಮಸ್ವಾಮಿರವರ ಹೆಸರಿನಲ್ಲಿ ಖಾತೆ ಬದಲಾವಣೆ ಆಗುವ ಸಮಯದಲ್ಲಿ ಬಸಪ್ಪ ಬಿನ್ ಮುನಿಯಪ್ಪ ಎನ್ನುವ ಹೆಸರನ್ನು round off ಮಾಡಿ ಅವರ ಹೆಸರು ತೋರಿಸಲಾಗಿದೆ ಎಂದರೆ ನಿಜ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಲ್ಲಾ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯ ಹೆಸರು ಬರುತ್ತಾ ಇದೆ ಎಂದರೆ ನಿಜ.

**10.** ಓ.ಎಸ್.ನಂ.402/1982 ದಾವೆಯು ವಜಾಗೊಂಡಿರುತ್ತದೆ. ಆ ದಾವೆಯು ವಜಾ ಆಗಿದೆ ಎಂದು ನಾನು ನನ್ನ ವಾದಪತ್ರದಲ್ಲಿ ಹೇಳಿದ್ದೇನೆ. ಆ ದಾವೆಯ ತೀರ್ಪಿನಲ್ಲಿ ಓ.ಎಸ್.ನಂ.121/1970 ರ ದಾವೆ ಬಗ್ಗೆ ಉಲ್ಲೇಖ ಇದ್ದು ಆ ದಾವೆಯ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುವ ಸಮಯಕ್ಕೆ ಓ.ಎಸ್.ನಂ.402/1982 ರಲ್ಲಿನ ತೀರ್ಪಿನ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿಲ್ಲ ಆದರೆ ಆ ದಾವೆ ವಜಾ ಆಗಿದೆ ಎಂದು ಮಾತ್ರ ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆ ಮತ್ತು ಅವರ ತಾತ ನಂಜಾರೆಡ್ಡಿ ಮತ್ತು ಬುಡ್ಡಾರೆಡ್ಡಿರವರು ನನ್ನ ಮಾವ ಮತ್ತು ನನ್ನ ಅತ್ತೆಯ ತಂದೆಯ ವಿರುದ್ಧ ದಾವಾ ಆಸ್ತಿಗೆ ಸಂಬಂಧಿಸಿದಂತೆ ಓ.ಎಸ್.ನಂ.121/1970 ರಲ್ಲಿ ದಾವೆಯನ್ನು ದಾಖಲಿಸಿ ಅದು ಡಿಕ್ರಿಯಾಗಿತ್ತು ಎಂದರೆ ಗೊತ್ತಿಲ್ಲ. ಈ ವಿಚಾರ ಎಲ್ಲಾ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-41 ಮತ್ತು 43 ಸರ್ವೆ ದಾಖಲೆಗಳನ್ನು ಹಾಜರುಪಡಿಸಿದ್ದು ಪ್ರತಿವಾದಿಯ ಮುತ್ತಾತನ ಹೆಸರು ನಮೂದಾಗಿದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರ ತಂದೆ ರಾಮಸ್ವಾಮಿ ಅಥವಾ ಪ್ರತಿವಾದಿಯರ ತಾತ ನಂಜಾರೆಡ್ಡಿರವರ ಕಡೆಯಿಂದ ನಾವು ಯಾವುದೇ ಕ್ರಯಪತ್ರ ಮಾಡಿಸಿಕೊಂಡಿರಲಿಲ್ಲ. ದಾವಾ ಸರ್ವೆ ನಂ.31/2 ರಲ್ಲಿ

ಪ್ರತಿವಾದಿಯರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮನೆ ಕಟ್ಟಿಕೊಂಡಿದ್ದಾರೆ ಮತ್ತು ಉಳಿಕೆ ಖಾಲಿ ಜಾಗ ಬಿಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. 2014 ರಲ್ಲಿ ಹಳೆಯ ಮನೆಯನ್ನು ಕೆಡವಿ ಹೊಸ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು 12 ಗುಂಟೆಯಲ್ಲಿ ಅವರು ಕಟ್ಟಿಕೊಂಡಿದ್ದಾರೆ ಮತ್ತು ನಾವು ಕಟ್ಟಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಾನು ಹೇಳಿದಂತೆ ಅಲ್ಲಿ ನಾವು ಯಾವುದೇ ಮನೆ ಕಟ್ಟಿಕೊಂಡಿಲ್ಲ ಮತ್ತು ಅಲ್ಲಿ ಪ್ರತಿವಾದಿಯರು ಮಾತ್ರ ಮನೆ ಕಟ್ಟಿಕೊಂಡು ಉಳಿಕೆ ಜಾಗ ಬಿಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ.

**11.** ನನ್ನ ಮಾವ ವೆಂಕಟಸ್ವಾಮಿಯಾಗಲೀ ಅಥವಾ ನನ್ನ ಅತ್ತೆಯ ತಂದೆ ಭದ್ರರೆಡ್ಡಿಯಾಗಲೀ ಓ.ಎಸ್.ನಂ.402/1982 ಮತ್ತು ಓ.ಎಸ್.ನಂ.121/1970 ಯಲ್ಲಿನ ತೀರ್ಪುಗಳ ವಿರುದ್ಧ ಮೇಲ್ಮನವಿ ಸಲ್ಲಿಸಿರಲಿಲ್ಲ. ನಾನು ಸೃಷ್ಟಿ ಮಾಡಿಕೊಂಡಂತಹ ವಿಲ್‌ನ ಆಧಾರದ ಮೇಲೆ ಪ್ರತಿವಾದಿಯರ ಮಾಲೀಕತ್ವದ ಆಸ್ತಿಗಳ ಬಗ್ಗೆ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರಿನಲ್ಲಿರುವ ಕಂದಾಯ ದಾಖಲೆಗಳನ್ನು ಕಂದಾಯ ಇಲಾಖೆಯಲ್ಲಿ ನಾನು ಪ್ರಶ್ನಿಸಿಲ್ಲ.

**12.** ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಅತ್ತೆಯು ಸುಳ್ಳು ದಾವೆ ಸಲ್ಲಿಸಿದ್ದಾರೆ ಮತ್ತು ನಾನು ಆಕೆಯಿಂದ ಅಧಿಕಾರ ಪತ್ರವನ್ನು ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣರೆಡ್ಡಿಯವರ ಸಹೋದರ ಸಹೋದರಿಯರು ಇದ್ದಾರೆ ಎಂದರೆ ನಿಜ.

**ಮರುವಿಚಾರಣೆಃ ಇಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**